Allotment of Zinc Sheets to South Kanara District during 1961-62 and 1962-63.

*Q.—464. Sri DAYANAND R. KALLE (Karkal):—

Will the Government be pleased to state:—

(*a*) the total number of zinc sheets allotted to South Kanara District for the years 1961-62 and 1962-63;

(*b*) the sheets allotted for each taluk during these years for domestic and agricultural purposes to the public;

(*c*) whether they have given any instructions to the Heads of Departments concerned as the method and manner for such distribution;

(*d*) whether they are aware that the major portion of the quota sanctioned to South Kanara District has been allotted exclusivly to Buntwal Taluk during the years 1961-62 and 1962-63;

(*e*) if so, the reasons for the same and what other steps they have taken to comply with the legitimate demands of the other taluk in South Kanara District?

*A.—Sri K. MALLAPPA (Minister for Industries and Commerce):—

(*a*) 1961-62 ... 3060
1962-63 ... 2185

(*b*) *For domestic purposes:*

	1961-62	1962-63
1. Coondapur ...	200	100
2. Udipi ...	300	100
3. Karkal ...	300	100
4. Belthangady ...	100	100
5. Buntwal ...	200	...
6. Puttur ...	300	100
7. Mnagalore ...	364	82
	1,764	582

For agricultural purposes:

1. Mangalore ...	240 sheets
2. Buntwal ...	200 ,,
3. Belthangady ...	... ,,
4. Puttur ...	280 ,,
5. Karkal ...	... ,,
6. Udipi ...	280 ,,
7. Coondapur ...	296 ,,
	1,296 sheets

(*c*) No.

(*d*) No.

(*e*) Does not arise.

ಶ್ರೀ ದಯಾನಂದ ಆರ್. ಕಳ್ಳಿ.—ಈ ಜಿಲ್ಲೆಗೆ ಕೊಟ್ಟಿರತಕ್ಕ ಕೋಟಾಅನ್ನು ಯಾವ ಆಧಾರದ ಮೇಲೆ ತಾಲ್ಲೂಕ್‌ವಾರ್ ಹಂಚಬೇಕೆಂದು ನಿರ್ಧಾರ ಕೊಟ್ಟಿದ್ದೀರಿ ?

†ಶ್ರೀ ಕೆ. ಮಲ್ಲಪ್ಪ.—ಇದರ ಬಗ್ಗೆ ಕೈಗಾರಿಕಾ ಶಾಖೆಯವರು ಏನು ಮಾಡುವುದಕ್ಕಾಗುವುದಿಲ್ಲ. ಇದು ಒಂದು ಸಾಮಾನ್ಯ ಕೋಟವೆಂದು ಭಾವಿಸಿ ಅದನ್ನು ಕೇವಲ ಕೆಲವು ನಣ್ಣ ಸೊಸೈಟಿಗಳಿಗೆ ಕೊಡುತ್ತಾರೆ. ಅಲ್ಪಸ್ವಲ್ಪ ಡೊಮೆಸ್ಟಿಕ್ ಪರ್ಪಸ್ಸಿಗೂ ಇವು ಸಿಗುತ್ತವೆ. ಹೆಚ್ಚಿಗೆ ಸಿಕ್ಕುವುದು ಅಗ್ರಿಕರ್‌ಚರರ್ ಪರ್ಪಸ್ಸಿಗೆ. ಇದನ್ನು ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ಕೊಡಬೇಕೆಂಬುದನ್ನು ತಿಳಿದು ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್ ಅವರು ಹಂಚುತ್ತಾರೆ.

ಶ್ರೀ ದಯಾನಂದ ಆರ್. ಕಳ್ಳಿ.—ವ್ಯವಸಾಯದ ಉದ್ದೇಶಗಳಿಗಾಗಿ 61-62 ಮತ್ತು 62-63ನೇ ಸಾಲಿನಲ್ಲಿ ಬೆಳ್ತಂಗಡಿ ಮತ್ತು ಕಾರ್ಕಳ ತಾಲ್ಲೂಕ್‌ಗಳಿಂದ ಜಿಂಕ್ ತಗಡುಗಳು ಬೇಕೆಂದು ಏನಾದರೂ ಬೇಡಿಕೆಗಳು ಬಂದಿವೆಯೇ ?

ಶ್ರೀ ಕೆ. ಮಲ್ಲಪ್ಪ.—ಬೇಡಿಕೆಗಳೇನೂ ಬಂದಿಲ್ಲವೆಂದು ನನಗೆ ಕಾಣುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಪ್ರಶ್ನೆಗೆ ಉತ್ತರವಾಗಿ "ಇಲ್ಲ" ಎಂದು ಹೇಳಿದ್ದೀರಿ. ಉತ್ತರದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ 1962-63ನೇ ಸಾಲಿನಲ್ಲಿ ಈ ಜಿಲ್ಲೆಗೆ ಒಟ್ಟು 2185 ಜಿಂಕು ಷೀಟುಗಳ ಪೈಕಿ 1603 ಜಿಂಕುಷೀಟುಗಳನ್ನು ಒಂದೇ ತಾಲ್ಲೂಕ್ ಬಂಟ್ವಾಳಕ್ಕೆ ಕೊಡಲು ಕಾರಣವೇನು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂಗ್ಲಿಷ್ ಮತ್ತು ಕನ್ನಡ ಪ್ರತಿಗಳಲ್ಲಿಯೇ ಈ ಬಗ್ಗೆ ವ್ಯತ್ಯಾಸವಿದೆ

Sri K. MALLAPPA.—There is some confusion here. The 1603 sheets were obtained by a stockist in Mangalore.

ಶ್ರೀ ವಿ. ಎಂ. ದೇವ್.—ಇಷ್ಟೊಂದು ಒಂದೇ ತಾಲ್ಲೂಕಿನಲ್ಲಿಯೇ ಹಂಚಲಾಗಿದೆಯೆಂದು ಹೇಳುವಾಗ, ಇದು ನ್ಯಾಯವೆಂದು ಹೇಗೆ ಹೇಳುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಇದು ಅಗತ್ಯತೆಯ ಮೇರೆ ಹೋಗುತ್ತದೆ. ಕೋ-ಆಪರೇಟಿವ್ ಸೊಸೈಟಿಯ ರಿಜಿಸ್ಟ್ರಾರ್ ಅವರು ಇದನ್ನು ಹಂಚಿದ್ದಾರೆ. The Buntwal Taluk Board President meant in a special requisition to the Registrar of Co-operative Societies on 26th January 1962 to the effect that, that taluk was not served by a stockist and that since there was a great demand for G. C. sheets from the agriculturists of that taluk a special allotment might be made to that taluk. Then, the Registrar asked the Mangalore stockist to make this allotment to the Buntwal Taluk on the basis of the request made by the Taluk Board President of Buntwal.

Sri G. V. GOWDA.—Why did the Government not feel the necessity of distributing to all the Taluks ?

Sri K. MALLAPPA.—I do not know the exact reason. Perhaps Buntwal is a flood-stricken taluk.

ಶ್ರೀ ವಿ. ಎಂ. ದೇವ್.—ಜಿಂಕು ಷೀಟುಗಳನ್ನು ಹಂಚಿರುವ ಅಂಕಿ ಅಂಶಗಳನ್ನು ನೋಡಿದರೆ ನಿಜವಾಗಿ ಎಲ್ಲಾ ತಾಲ್ಲೂಕ್‌ಗಳಲ್ಲಿಯೂ ಪಾರ್ಜೇಜ್ ಬಹಳ ಜಾಸ್ತಿ ಇದೆ ಎಂಬುದು ಗೊತ್ತಾಗುತ್ತದೆ. ಅಂದಮೇಲೆ ಮಂತ್ರಿಗಳು ಉತ್ತರ ಹೇಳುವಾಗ ಕಾರಣ ಸರಿಯಾಗಿ ಗೊತ್ತಾಗಲಿಲ್ಲ. ಅದಕ್ಕೆ ಕೊಡುವುದು ನ್ಯಾಯವೆನಿಸಿತು ಆ ರೀತಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರಲ್ಲಾ ! ಇದೇನು ಉತ್ತರವೇ ?

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರು ದಯವಿಟ್ಟು ಪ್ರಶ್ನೋತ್ತರಗಳನ್ನು ಇನ್ನೊಂದು ಸಾರಿ ಓದಬೇಕು. 1962ನೇ ಡಿಸೆಂಬರ್ ಮುಂಚೆ, ಅದರಲ್ಲೂ ಈ ಒಂದು ತುರ್ತು ಪರಿಸ್ಥಿತಿ ಬರುವುದರೊಳಗಾಗಿ ಇದರ ವಿತರಣೆ ಆಗಿ ಹೋಗಿದೆ. ಆದ್ದರಿಂದ ಈ ತೀರ್ಮಾನ 1962 ಡಿಸೆಂಬರ್ ಮುಂಚೆ ಆಗಿರತಕ್ಕದ್ದು.

ಶ್ರೀ ದಯಾನಂದ ಆರ್. ಕಳ್ಳಿ.—ನಾನು ಕೇಳುವುದಿಷ್ಟೆ. ಬೇರೆ ಬೇರೆ ತಾಲ್ಲೂಕ್‌ಗಳನ್ನೆಲ್ಲಾ ಬಿಟ್ಟು ಬಿಟ್ಟು 1962-63ನೇ ಸಾಲಿನಲ್ಲಿ ಈ ಒಂದು ತಾಲ್ಲೂಕಿಗೆ ಕೊಟ್ಟಿರುವ ಕಾರಣವೇನು ?

ಶ್ರೀ ಕೆ. ಮಲ್ಲಪ್ಪ.—ಯಾವ ತಾಲ್ಲೂಕ್‌ನಲ್ಲಿಯೂ ಅನ್ಯಾಯವಾಗಿಲ್ಲ. ಈ ಒಂದು ತಾಲ್ಲೂಕಿಗೆ ಹಿಂದೆಯೇ ಕೊಡಬೇಕೆಂದು ತೀರ್ಮಾನವಾಗಿತ್ತು. ಬಂಟ್ವಾಳ ತಾಲ್ಲೂಕ್‌ನಲ್ಲಿ ಇದರ ಅವಶ್ಯಕತೆ ಇದೆ ಸ್ಪೆಷಲ್ಲಾಗಿ ಕೊಡಬೇಕು ಎಂಬುದಾಗಿ ಆ ತಾಲ್ಲೂಕ್ ಬೋರ್ಡಿನ ಛೇರಮನ್ ಅವರು ಅರ್ಜಿ ಹಾಕಿಕೊಂಡದ್ದರಿಂದ ಆ ರೀತಿ ಅದನ್ನು ಅಲ್ಲಿಗೆ ತರಿಸಿಕೊಟ್ಟಿದ್ದೇವೆ.

ಶ್ರೀ ಎ. ಕೃಷ್ಣಶೆಟ್ಟಿ.—1962-63ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಇರಲಿಲ್ಲವೆಂಬುದು ಗೊತ್ತಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಆಗಲೇ ಬರಬೇಕೆಂದೇನೂ ಇಲ್ಲ, ಅದಕ್ಕಿಂತ ಹಿಂದೆ ಬಂದಿರಬಹುದು. ಆದರೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಅಲ್ಲಿಗೆ ಈತನಕ ಸಿಕ್ಕಿಲ್ಲ, ಅಲ್ಲಿ ಸ್ಯಾಕಿನ್ಸ್ ಇಲ್ಲ ಕೊಡಬೇಕು ಎಂದು ಅರ್ಜಿ ಹಾಕಿದ ಮೇರೆ, ಅದನ್ನು ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್ ಅವರಿಗೆ ಕಳುಹಿಸಿ, ಮಂಗಳೂರಿಗೆ ಬಂದಿದ್ದ 1603 ಷೀಟುಗಳನ್ನು ಬಂಟವಾಳಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—ತಾಲ್ಲೂಕು ಬೋರ್ಡಿಗೆ ಜಿಂಕ್ ಷೀಟುಗಳು ಬಂದರೆ, ತಾಲ್ಲೂಕು ಬೋರ್ಡಿನ ಸದಸ್ಯರೇ ಹಂಚಿಕೊಳ್ಳುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಈತನಕ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ಸ್ಯಾಕ್ ಮಾಡುವುದಕ್ಕೂ ಜನರ ಬೇಡಿಕೆಗೂ ಸಂಬಂಧವೇನು ? ಮಂಗಳೂರಿನಲ್ಲಿ 1603 ಸ್ಯಾಕ್ ಮಾಡಿದೆ, ಬೇಡಿಕೆ ಬಂಟವಾಳದಿಂದ ಬಂದಿದೆ. ಅದಕ್ಕೂ ಇದಕ್ಕೂ ಸಂಬಂಧವೇನು ?

ಶ್ರೀ ಕೆ. ಮಲ್ಲಪ್ಪ.—ಸಂಬಂಧವಿದೆ ; ಇದನ್ನು ತರಿಸಿ ಯಾರಾದರೂ ದಾಸ್ತಾನು ಮಾಡಬೇಕು; ರಿಜಿಸ್ಟರ್ಡ್ ಸ್ಯಾಕಿಸ್ಟ್ ಮಂಗಳೂರಿನಲ್ಲಿದ್ದರು. ಅವರು 1603 ಷೀಟುಗಳನ್ನು ದಾಸ್ತಾನು ಮಾಡಿದ್ದರು. ಅದನ್ನು ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಬಂಟವಾಳಕ್ಕೆ ಕಳುಹಿಸಿ ವಿತರಣೆ ಮಾಡಬೇಕೆಂದು ಹೇಳಿದರು, ಆ ರೀತಿ ಆಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಂಟವಾಳ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಸ್ಪೆಷಲ್ ಆಗಿ ಕೇಳಿದರೆಂದು ಹೇಳಿದರಿ, ಅವರು ರೈತರಿಂದ ಅರ್ಜಿ ತರಿಸಿಕೊಂಡು ಇದನ್ನು ತಾವು ತೆಗೆದು ಕೊಂಡು ಮ್ಯಾರಿಕೊಂಡರೆಂಬುದು ಗೊತ್ತಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಆ ರೀತಿ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಲ್ಲ ತಾಲ್ಲೂಕುಗಳವರೂ ಕೇಳಿದರೆ ಏಕೆ ಕೊಟ್ಟಿಲ್ಲ ?

ಶ್ರೀ ಕೆ. ಮಲ್ಲಪ್ಪ.—ಬೇರೆಯವರಿಂದ ಅರ್ಜಿಗಳನ್ನು ತೆಗೆದುಕೊಂಡು, ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರು ಹೋಗಿ ಷೀಟುಗಳನ್ನು ತರುವುದಿಲ್ಲ. ರಿಜಿಸ್ಟರ್ಡ್ ಸ್ಯಾಕಿಸ್ಟ್ ದಾಸ್ತಾನು ಮಾಡಬೇಕು. Demostic useಗಾದರೆ ಡೆಪ್ಯುಟಿ ಕಮೀಷನರು, ವ್ಯವಸಾಯ ಸಂಬಂಧವಾದ ಕೆಲಸಗಳಿಗಾದರೆ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಅವರು ಪರ್ಮಿಟ್ ಕೊಡುತ್ತಾರೆ. ಅದಕ್ಕನುಸಾರವಾಗಿ ಸ್ಯಾಕಿಸ್ಟ್ಸ್ ಕೊಡಬೇಕಾಗುತ್ತದೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—1962-63ರಲ್ಲಿ ಯಾರೋ ಒಬ್ಬರು ವ್ಯಕ್ತಿ ಪ್ರಭಾವಕ್ಕೊಳಗಾಗಿ ಅಧಿಕಾರಿಗಳು ಹೀಗೆ ಕೊಟ್ಟಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಯಾರ ಪ್ರಭಾವಕ್ಕೂ ಒಳಗಾಗಿಲ್ಲ. ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರ ಆಜ್ಞೆಯನ್ನನುಸರಿಸಿ ಕೊಟ್ಟಿದೆಯೆಂದು ಹೇಳಿದ್ದೇನೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—ಅದರ ಪೈಕಿ ರೈತರಿಗೆ ಒಂದು ಷೀಟ್‌ಕೂಡ ಹೋಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಮಲ್ಲಪ್ಪ.—ವಿವರಗಳನ್ನು ಕೊಟ್ಟರೆ ವಿಚಾರಮಾಡಬಹುದು.

Starting of the Rural Electrification Works in the State.

* *Q.*—288. Sri GANJI VEERAPPA (Harihar).—

Will the Government be pleased to state :—

(*a*) whether they have taken a decision to stop the rural electrification works in the State ;

(*b*) whether the above decision apply even to such of the works, wherein estimates are prepared and got sanctioned ;

(*c*) whether the above decision applies to requests for power for irrigation pump sets ?